(ಲ) ಕೆ.ಇ.ಬಿ.ಯವರಿಂದ ನೀಡಂವ ವಿದ್ಯುತ್ ಬಿಲ್ಲುಗಳಲ್ಲಿ ವ್ಯತ್ಯಾಸ ಬಂದಿರುವ ದೂರುಗಳ ಬಗ್ಗೆ

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ),—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಕೆ.ಇ.ಬಿ. ಇಲಾಖೆಯವರ ವಿದ್ಯುತ್ ಬಳಕೆಯಾದ ಬಗ್ಗೆ ನೀಡುವ ಬಿಲ್ಲಿನಲ್ಲಾಗುವ ವ್ಯತ್ಯಾಸದ ಬಗ್ಗೆ ರಾಜ್ಯ ದಾದ್ಯಂತ ದೂರುಗಳು ಬರುತ್ತಿರುವಂಥಾದ್ದು ಸರ್ವೇಸಾಮಾನ್ಯವಾಗಿದೆ.

ಬೆಂಗಳೂರಿನ ರಾಜಾಜಿನಗರದ ಶಿವನಹಳ್ಳಿಯಲ್ಲಿರುವ ಹೋಟೆಲ್ ಆಶೀರ್ವಾದ್ ಇದರ ವಿದ್ಯುತ್ ಬಳಸಿದ ಬಾಬ್ತು ಬೇರೆ, ಬೇರೆ ಬಿಲ್ಲುಗಳು ಬಂದಿದ್ದು, ಅದರಲ್ಲಿ ಒಂದು ಮೀಟರಿನ ಬಾಬ್ತು ರೂ. ೯,೬೪೯-೦೦ ಬಿಲ್ಲು ಬಂದಿತ್ತು. ಈ ಬಿಲ್ಲಿನ ಬಗ್ಗೆ ಆಫೀಸಿನಲ್ಲಿ ಹೋಗಿ ವಿಚಾರಿಸಿದರೆ ಸರಿಯಾದ ಉತ್ತರವೇ ದೊರೆಯಲಿಲ್ಲ. ಕೊನೆಗೆ ಸದರಿ ಹೋಟೆಲ್‌ನ ಮಾಲೀಕರಾದ ಶ್ರೀ ರಾಮದಾಸ್ ಶ್ಯಾನುಭೋಗರು ಸದರಿ ಬಿಲ್ಲಿನ ಪೂರ್ತಿ ಹಣವನ್ನು ಪಾವತಿ ಮಾಡಿದ ನಂತರ ಅಂದರೆ ತಾ: ೨೫-೭-೧೯೮೭ರಂದು ಬಿಲ್ಲಿನ ಲೆಕ್ಕದ ಬಗ್ಗೆ ವರದಿ ಕೊಡಬೇಕೆಂದು ಅರ್ಜಿ ಸಲ್ಲಿಸಿದರು, ಉತ್ತರ ಇಲ್ಲ. ಪುನಃ ತಾ: ೧೭-೧೦-೧೯೮೭ರಂದು ರಿಜಿಸ್ಟರ್ಡ್ ಅಂಚೆ ಮೂಲಕ ಇನ್ನೊಂದು ಅರ್ಜಿ ಸಲ್ಲಿಸಿ ಬಿಲ್ಲಿನ ಬಾಬ್ತು ವಿವರ ಕೇಳಿದರು. ಆದಕ್ಕೂ ಉತ್ತರವಿಲ್ಲ. ಆದರೆ ನಂತರ ೧೨-೧೨-೧೯೮೭ರಂದು ಮಾನ್ಯ ಸಚಿವರಿಗೆ ಈ ವಿಚಾರದಲ್ಲಿ ನಾನೇ ಒಂದು ಪತ್ರ ಬರೆದೆ ಆದಕ್ಕೂ ಸಂಬಂಧಪಟ್ಟ ಅಧಿಕಾರಿಗಳ ಉತ್ತರ ಇಲ್ಲ. ನಾನು ತಿಳಿದ ಪ್ರಕಾರ ಆ ಬಿಲ್ಲಿನಲ್ಲಿ ಸುಮಾರು ೭,೦೦೦-೦೦ಕ್ಕೂ ಮಿಕ್ಕಿ ರೂಪಾಯಿ ಹೆಚ್ಚುವರಿ ಹಣ ಸಂದಾಯವಾಗಿದೆ. ಆದರೆ ಕೆ.ಇ.ಬಿ. ಅಧಿಕಾರಿಗಳು ಆ ಬಿಲ್ಲಿನ ಬಾಬ್ತು ವರದಿ ಕೇಳಿದರೆ ಏಕೆ ಕೊಡುವುದಿಲ್ಲ ? ಮಾನ್ಯ ಸಚಿವರು ಸದರಿ ಬಿಲ್ಲಿನ ಬಾಬ್ತು ತಕ್ಷಣ ವರದಿ ತರಿಸಿಕೊಡ ಬೇಕಾಗಿ ವಿನಂತಿ. ಅಲ್ಲದೆ ಸಂಬಂಧಪಟ್ಟ ತೊಂದರೆ ಕೊಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀನರಸಿಂಹಯ್ಯ (ಮಾನ್ಯ ವಿದ್ಯುಚ್ಛಕ್ತಿ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ರಾಜಾಜಿನಗರದ ಶಿವನಹಳ್ಳಿಯಲ್ಲಿನ ಶ್ರೀಮಂಜುನಿಗಂಗಪ್ಪನವರ ಹೋಟೆಲ್‌ಗೆ ದಿನಾಂಕ ೩೧-೧೦-೧೯೮೭ರಂದು ವಿದ್ಯುತ್ ಸರಬರಾಜು ಮಾಡಲಾಯಿತು. ಈ ಸ್ಥಾವರದ ಆರ್.ಆರ್. ನಂ. ಎನ್.ಪಿ. ೨೮೭. ಈ ಗ್ರಾಹಕರು ಪೂರೈಯಾನಃಬಿಲ್ಲಿನ ಹಣ ಕ್ರಮವಾಗಿ ಮತ್ತು ಪೂರ್ತಿಯಾಗಿ ಪಾವತಿ ಮಾಡುತ್ತಿರಲಿಲ್ಲ. ಹಿಂಗಾಗಿ ಬಾಕಿ ಉಳಿದಿರಲು ಆಸ್ಪದವಾಯಿತು. ೧೯೮೪ರ ಜನವರಿಯಿಂದ ಈ ಖಾತೆಯ (ಗ್ರಾಹಕರ) ಬಿಲ್ಲಿನ ಹಣ, ಸಂದಾಯಮಾದ ಹಣ ಮತ್ತು ಉಳಿಕೆಯ ಒಂದು ಪಟ್ಟಿ ಲಗತ್ತಿಸಲಾಗಿದೆ.

ಮೇಲ್ಕಂಡ ಪಟ್ಟಿಯಂನ್ನು ಪರಿಶೀಲಿಸಿದರೆ ಗ್ರಾಹಕರು ಸರಿಯಾಗಿ ಮಾಹೆಯಾನ ಬಿಲ್ಲನ್ನು ಪಾವತಿ ಮಾಡದಿದ್ದುದು ವ್ಯಕ್ತವಾಗುತ್ತದೆ. ಇದರಿಂದಾಗಿ ೧೯೮೫ನೇ ಡಿಸೆಂಬರ್ ಕೊನೆವೇಳೆಗೆ ೩,೭೯೪-೦೬ ರೂಪಾಯಿಗಳ ಬಾಕಿ ಉಳಿದಿತ್ತು.

೧೯೮೬ನೇ ಜನವರಿಯಿಂದ ಆಗಸ್ಟ್‌ವರೆಗೆ ಮೀಟರ್ ರೀಡಿಂಗ್ ದೊರೆಯದಿದ್ದುದರಿಂದ ಆ ಅವಧಿಗೆ ಮಾಮೆಯಾನ ೨೨ ರೂ.ಗಳಿಗೆ (ಫಿಕ್ಸೆಡ್ ಛಾರ್ಜನ್ನು) ಬಿಲ್ಲು ನೀಡಲಾಗಿತ್ತು. ಆದರೆ ಈ ಅವಧಿಯಲ್ಲಿ ಮೀಟರು ೪೦೨೮ ಯೂನಿಟ್ಟುಗಳ ಬಳಕೆ ದಾಖಲು ಮಾಡಿತ್ತು.

ಮೇಲ್ಕಂಡ ಮೀಟರನ್ನು ಆಗಸ್ಟ್ ತಿಂಗಳನಲ್ಲಿ ಬದಲಾಯಿಸಲಾಯಿತು. ಆದರೆ ಇದು ದಾಖಲಾತಿ ಸರಿಯಾಗಿ ಮಾಡಲಿಲ್ಲ. ಹೀಗಾಗಿ ಇದನ್ನು ಪುನಃ ಮಾರ್ಚ್ ೧೯೮೭ರಲ್ಲಿ ಬದಲಾಯಿಸಲಾಯಿತು. ನಂತರ ಈ ಮೀಟರ್ ಸರಿಯಾಗಿ ದಾಖಲು ಮಾಡುತ್ತಿದೆ. ೧೯೮೬ರ ಸೆಪ್ಟೆಂಬರ್‌ನಿಂದ ೧೯೮೭ ಮಾರ್ಚಿವರೆಗೆ ಮೀಟರ್ ಸರಿಯಾಗಿ ದಾಖಲು ಮಾಡದಿದ್ದ ವೇಳೆಯಲ್ಲಿ ಮಾಹೆಯಾನ ೨೨ರೂ.ಗಳಿಗೆ ಮಾತ್ರ ಬಿಲ್ಲು ನೀಡಲಾಯಿತು.

ಆದರೆ ಮಂಡಲಿಯು ನಿಯಮದ ಪ್ರಕಾರ ಈ ಅವಧಿಗೆ ಆ ವರ್ಷದಲ್ಲಿ ಗರಿಷ್ಠ ಪ್ರಮಾಣದಲ್ಲಿ ವಿದ್ಯುತ್ ಬಳಕೆಯಾದ ಯಾವುದಾದರೂ ೩ ತಿಂಗಳ ಬಳಕೆ ಸರಾಸರಿ ಆಧಾರದ ಮೇಲೆ ಬಿಲ್ಲು ನೀಡಬೇಕು. ಹೀಗಾಗಿ ಕಡಿಮೆ ಹಣಕ್ಕೆ ಬಿಲ್ಲು ನೀಡಲಾಗಿತ್ತು. ಮೇಲ್ಕಂಡ ಕಾರಣಗಳಿಂದಾಗಿ ಏಪ್ರಿಲ್ ೧೯೮೭ರಲ್ಲಿ

ಕಡಿಮೆ ಹಣಕ್ಕಾಗಿ ರೂ. ೫೮೪೫–೯೦ಗಳ ಬಾಕಿಯನ್ನು ಏಪ್ರಿಲ್ ೧೯೮೭ರ ಬಿಲ್ಲಿನಲ್ಲಿ ಸೇರಿಸಲಾಯಿತು. ಇದರ ವಿವರ ಹೀಗಿದೆ :

	ರೂ. ಪೈ.
೧. ೧೯೮೬ನೇ ಜನವರಿಯಿಂದ ಸೆಪ್ಟೆಂಬರ್‌ವರೆಗಿನ ಬಳಕೆ ಬಾಬ್ತು (ಮೀಟರ್‌ನಲ್ಲಿ ದಾಖಲಾದದ್ದು, ಆದರೆ ಬಿಲ್ಲು ನೀಡದಿದ್ದದ್ದು) ೪೦೨೮ ಯೂನಿಟ್‌ಗಳಿಗೆ, ಯೂನಿಟ್‌ಗೆ ೫೫ ಪೈಸೆಗಳಂತೆ	೩೦೨೧–೦೦
೨. ೧೯೮೬ನೇ ಅಕ್ಟೋಬರ್‌ನಿಂದ ೧೯೮೭ನೇ ಮಾರ್ಚ್ ತಿಂಗಳಿಗೆ ಸರಾಸರಿ ವಿದ್ಯುತ್ ಬಳಕೆ ಬಗ್ಗೆ ಮಾಡಿದ ಬಿಲ್ಲು ೩೨೩೪ ಯೂನಿಟ್‌ಗಳಿಗೆ, ಯೂನಿಟ್‌ಗೆ ೮೫ ಪೈಸೆಗಳಂತೆ	೨೭೪೯–೯೦
೩. ನಿಗದಿತ ಬಿಲ್ಲು ಮಾಹೆಯಾನ ೨೪ರ ರೂ. ಬದಲು ೨೨ ರೂ.ಗಳಿಗೆ ಬಿಲ್ಲು ನೀಡಿದ್ದು ಬಾಬ್ತು, ಡಿಸೆಂಬರ್ ೧೯೮೫ರಿಂದ ಮಾರ್ಚ್ ೧೯೮೭ರವರೆಗೆ	೨೬–೦೦
	೫೮೪೫–೯೦

ಈ ಗ್ರಾಹಕರು ೧೯೮೭ ಜುಲೈವರೆಗೆ ಮಾಹೆಯಾನ ಹಣ ಕ್ರಮವಾಗಿ ಮತ್ತು ಪೂರ್ಣವಾಗಿ ಪಾವತಿ ಮಾಡದಿದ್ದುದರಿಂದ ಬಾಕಿ ಹಣ ರೂ. ೯೬೪೮–೦೦ ಏರಿತು. ಇದನ್ನು ಗ್ರಾಹಕರು ೧೯೮೭ನೇ ಜುಲೈ ತಿಂಗಳಲ್ಲಿ ಪಾವತಿ ಮಾಡಿದ್ದರೆ ಆಲ್ಲಿಗೆ ಬಾಕಿ ಏನೂ ಉಳಿಯಬೇಕಾಗಿರಲಿಲ್ಲ.

ಬಾಕಿ ರೂ. ೯೬೪೮–೦೦ಕ್ಕೆ ವಿವರ :

೧. ೧೯೮೭ನೇ ಮಾರ್ಚ್ ವೇಳೆಗೆ ಬಾಕಿ ನಿಂತ ಹಣ	೧೨೯೧–೯೦
೨. ಕಡಿಮೆ ಬಿಲ್ಲಿನ ಬಾಬ್ತು	೫೮೪೫–೯೦
೩. ಏಪ್ರಿಲ್ ೧೯೮೭, ಮೇ ೧೯೮೭, ಜೂನ್ ೧೯೮೭, ಜುಲೈ ೧೯೮೭ರ ಬಿಲ್ಲಿನ ಬಾಬ್ತು ಬಡ್ಡಿ ಸೇರಿ	೨೫೧೦–೨೦
ಒಟ್ಟು	೯೬೪೮–೦೦

ಈ ಬಿಲ್ಲಿನ ಬಾಬ್ತು ಮಂಡಲಿಯ ಕಛೇರಿಯಲ್ಲಿ ವಿವರಣೆ ಕೇಳಿದಾಗ ಅವರಿಗೆ ಅದರ ಬಗ್ಗೆ ಮೊಕ, ವಿವರ ನೀಡಲಾಯಿತು. ಸದರೀ ಖಾತೆದಾರರಾದ (ರಿಜಿಸ್ಟರ್ಡ್ ಕನ್‌ಸ್ಯೂಮರ್) ಶ್ರೀಮತಿನಿಂಗಪ್ಪ ನವರಿಂದ ಸ್ಪಷ್ಟೀಕರಣ : ವಿವರ ಬಯಸಿ ಲಿಖಿತ ಬೇಡಿಕೆ ಬಂದಿಲ್ಲ. ಆದ್ದರಿಂದ ಖಾತೆದಾರನಿಗೆ ಲಿಖಿತ ವಿವರ ನೀಡಿಲ್ಲ. ಖಾತೆದಾರರ ವಿನಹ ಉಳಿದವರಿಗೆ ಖಾತೆ ವಿವರ ನೀಡುವುದು ಮಂಡಲಿಯಲ್ಲಿ ರೂಢಿಯಿಲ್ಲ. ಶ್ರೀರಾಮದಾಸ್ ಶ್ಯಾನುಭೋಗರು ಖಾತೆದಾರರಲ್ಲ. ಬೇರೆಯವರು ಖಾತೆದಾರರ ಪರ ಬಂದು ವಿವರಣೆ ಕೇಳಿದಾಗ ಬಾಯಿ ಮಾತಿನಲ್ಲಿ ವಿವರ ನೀಡಲಾಗುತ್ತದೆ.

೭ ಹೊಸದುರ್ಗ ಜನರಲ್ ಆಸ್ಪತ್ರೆ ಸಂಸಜ್ಜಿತವಾಗಿಲ್ಲದಿರುವುದು

ಶ್ರೀ ಜಿ. ರಾಮದಾಸ್.—ಮಾನ್ಯ ಅಧ್ಯಕ್ಷರೇ, ಹೊಸದುರ್ಗ ತಾಲ್ಲೂಕಿನಲ್ಲಿ ಒಂದು ಜನರಲ್ ಆಸ್ಪತ್ರೆ ಇದ್ದು ಪಟ್ಟಣದ ಕೇಂದ್ರದಲ್ಲಿದೆ. ಈ ಆಸ್ಪತ್ರೆಯ ಕಟ್ಟಡದ ಒಳಗಡೆ ಮತ್ತು ಹೊರಗಡೆ ಶುಚಿಬದ್ಧವಾಗಿಲ್ಲ. ಈ ಆಸ್ಪತ್ರೆಯಲ್ಲಿ ಕಕ್ಕಸುಗಳನ್ನು ಮತ್ತು ವಾರ್ಡುಗಳನ್ನು ಕ್ಲೀನ್ ಮಾಡಲಿಕ್ಕೆ ಒಬ್ಬ ಮಹಿಳೆ ಜವಾನರಿದ್ದಾರೆ. ಉಳಿದ ಕೆಲಸಗಾರರು ಈ ಕೆಲಸಕ್ಕೆ ಭಾಗ ವಹಿಸುವುದಿಲ್ಲ. ಹಾಸಿಗೆ ಮೇಲೆ ಹಾಕುವ ಬೆಡ್‌ಶೀಟ್‌ಗಳು ಕ್ಲೀನ್ ಇಲ್ಲದೆ ಕೊಳೆಯಿಂದ ಕೂಡಿ